

ಡಾ.ವಿನೋದ ಛೆಬ್ಬಿ

**ಕಾಮಸುಖಕ್ಕೆಂದೇ ಕಟ್ಟಿಕೊಂಡ ಬದ್ಧದಾಂಪತ್ಯದಲ್ಲಿ ಕಾಮಾಸಕ್ತಿ ಕಡಿಮೆಯಾಗುತ್ತಿದೆಯೆ?**

# 99: ನಿಸ್ಸಾರ ಕಾಮಸಂಬಂಧಗಳು

ಇತ್ತೀಚೆಗೆ ರಾಜಸ್ತಾನಿ ದಂಪತಿ ನನ್ನನ್ನು ಭೇಟಿ ಮಾಡಿದ್ದರು. ಮದುವೆಯಾಗಿ ಎರಡು ವರ್ಷವಾಗಿದೆ. ಇನ್ನೂ ಗರ್ಭಧಾರಣೆ ಆಗಿಲ್ಲವೆಂದು ಹೆಂಡತಿ ಮಹಿಳಾ ವೈದ್ಯರ ಹತ್ತಿರ ಹೋಗಿದ್ದಾಳೆ. ಅವರು ಪರೀಕ್ಷಿಸಿ, 'ಪೂರ್ತಿ ಪ್ರಮಾಣದ ಸಂಭೋಗ ಆಗಿಲ್ಲ' ಎಂದು ವರದಿ ಕೊಟ್ಟು ನನ್ನ ಹತ್ತಿರ ಕಳಿಸಿದ್ದಾರೆ. ನಾಲ್ಕೇ ನಾಲ್ಕು ಮಾತಾಡುವುದರಲ್ಲಿ ಕಾರಣ ಗೊತ್ತಾಯಿತು: ದಂಪತಿಗೆ ಲೈಂಗಿಕ ಕ್ರಿಯೆಯ ಬಗೆಗೆ ಪ್ರಾಥಮಿಕ ಜ್ಞಾನವಿಲ್ಲ. ಅವರಿಗೆ ಜನನಾಂಗದ ರಚನೆ ಹಾಗೂ ಸಂಭೋಗಸೂಕ್ತ ಆಸನವನ್ನು ಹೇಳಿಕೊಟ್ಟು, ದಿನಬಿಟ್ಟು ದಿನ ಸಂಭೋಗ ಮಾಡಿದರೆ ಗರ್ಭಕಟ್ಟುವ ಸಂಭವ ಹೆಚ್ಚಿದೆ ಎಂದು ತಿಳಿಸಿ ಕಳಿಸಿದೆ. ಆದರೆ ಈಗ ಹೇಳಲು ಹೊರಟಿರುವುದು ಅದರ ಬಗೆಗಲ್ಲ. ಅವರೊಡನೆ ಮಾತಾಡುವಾಗ ಬೇರೊಂದು ಮಹತ್ವದ ವಿಷಯ ಬಯಲಿಗೆ ಬಂತು. ನನ್ನನ್ನು ಭೇಟಿಮಾಡಿದ ಸಾವಿರಾರು ದಂಪತಿಗಳಲ್ಲಿ ವ್ಯಾಪಕವಾಗಿರುವ – ಆದರೆ ಅಷ್ಟಾಗಿ ಬೆಳಕಿಗೆ ಬರದಿರುವ – ಸಂಗತಿಯೊಂದನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ರಾಜಸ್ತಾನಿ ದಂಪತಿ ನನ್ನೆದುರು ಕೂತುಕೊಂಡ ನಂತರ ಆಡಿದ ಮೊಟ್ಟಮೊದಲ ಮಾತು ನನಗಿನ್ನೂ ಅಕ್ಷರಶಃ ನೆನಪಿದೆ: 'ಮದುವೆಯಾಗಿ ಎರಡು ವರ್ಷವಾಗಿದೆ. ಇತ್ತೀಚೆಗೆ ಮಗು ಬೇಕೆಂದು ಸೇರಲು ಹೊರಟೆವು. ಸರಿಯಾಗಿ ಒಳಗೆ ಹೋಗುತ್ತಿಲ್ಲ ಎಂದು ಗೊತ್ತಾಯಿತು. ಹಾಗಾಗಿ...' ಅಂದರೆ, ಮದುವೆಯಾಗಿ ಸುಮಾರು ಸಮಯ ಕಳೆದರೂ ಕಾಮಕೂಟಕ್ಕೆ ಅಷ್ಟಾಗಿ ಮನಸ್ಸು ಮಾಡಿಲ್ಲ, ಹಾಗೂ ಮಗು ಬೇಕೆಂದಾಗ ಮಾತ್ರ (ಪೂರ್ಣಪ್ರಮಾಣದ) ಸಂಭೋಗಕ್ಕೆ ಯತ್ನಿಸಿದ್ದಾರೆ. ಈ ವಿಚಾರವನ್ನು ಅವರು ತಿಳಿಸಿದ ರೀತಿ ಹೇಗಿತ್ತು ಎಂದರೆ, ಮನೆಯ ಹೊರಗೆ ಕಾಲಿಡಬೇಕಾದರೆ ಮಾತ್ರ ಒಪ್ಪವಾದ ಉಡುಪು ಧರಿಸಬೇಕು, ಮನೆಯೊಳಗೆ ಹೇಗಿದ್ದರೂ ನಡೆಯುತ್ತದೆ ಎನ್ನುವಂತಿತ್ತು. 'ಸರಿಯಾಗಿ ಒಳಗೆ ಹೋಗುತ್ತಿಲ್ಲ' ಎಂಬ ಸಂಗತಿ ಮೊದಲೇ ಗೊತ್ತಿದ್ದರೂ ವೈದ್ಯರನ್ನು ಮದುವೆಯಾದ ಶುರುವಿನಲ್ಲೇ ಯಾಕೆ ಸಂಪರ್ಕಿಸಲಿಲ್ಲ ಎಂದು ಕೇಳಿದರೆ ಸಮಂಜಸ ಉತ್ತರ ಬರಲಿಲ್ಲ. ಒಂದು ವೇಳೆ ಮಗು ಈಗಲೇ ಬೇಡವೆಂದಿದ್ದರೆ ಮೊದಲ ಸಂಭೋಗದ ಪ್ರಯತ್ನ ಇನ್ನೂ ಮುಂದೆ ಹೋಗುತ್ತಿತ್ತೇನೋ ಎಂದು ನೇರವಾಗಿ ಕೇಳಿದಾಗ, 'ಐಸಾ ಕುಛ್ ನಹೀ!' ಎಂದು ಗಲಿಬಿಲಿಯ ನಗು ಬೀರಿದರು. ಈಗಲೇ ಗರ್ಭಧಾರಣೆ ಬೇಡ ಎನ್ನುವ ಉದ್ದೇಶದಿಂದ ಸಂಭೋಗಕ್ಕೆ ಯತ್ನಿಸಿಲ್ಲವೇನೋ ಎಂದರೆ ಅದೂ ಅಲ್ಲ – ಯಾಕೆಂದರೆ ಹನ್ನೊಂದು ಸದಸ್ಯರ ಸಾಂಪ್ರದಾಯಿಕ ಕುಟುಂಬದ ಭಾಗವಾದ ಇವರಿಗೆ ಮದುವೆಯಾದ ನಂತರ ಬೇಗ ಮಗುವಾದಷ್ಟೂ ಹೆಮ್ಮೆಯ ಸಂಗತಿ ಆಗುತ್ತದೆ. ಸಾರಾಂಶ ಏನೆಂದರೆ, ಸಂಭೋಗೇತರ ಚಟುವಟಿಕೆಗೂ ಪೂರ್ಣಪ್ರಮಾಣದ ಸಂಭೋಗಕ್ಕೂ ಇರುವ ಒಟ್ಟಾರೆ ವ್ಯತ್ಯಾಸವನ್ನು ಅವರು ಕಡೆಗಣಿಸಿದ್ದು ಎದ್ದುಕಾಣುತ್ತಿತ್ತು.

ಈ ಸಂದರ್ಭದಲ್ಲಿ ಇನ್ನೊಂದು ದಂಪತಿ ನೆನಪಾಗುತ್ತಿದ್ದಾರೆ. ಮುಂಚೆ ಸರಿಯಾಗಿ ನಡೆಯುತ್ತಿದ್ದು, ಬರಬರುತ್ತ ನಿಂತುಹೋದ ಕಾಮಕೂಟವನ್ನು ಮುಂದಿಟ್ಟುಕೊಂಡು ಬಂದಿದ್ದಾರೆ. ಇವರದು ಇಂಟರ್‌ನೆಟ್ ಪ್ರೇಮವಿವಾಹ. ಸುಮಾರು ಏಳೆಂಟು ತಿಂಗಳು ಸಂಪರ್ಕದಲ್ಲಿದ್ದು, ಸಮಸ್ಯೆ ಹುಟ್ಟುಹಾಕಬಹುದಾದ ಒಂದೊಂದು ವಿಷಯವನ್ನೂ (ಉದಾ. ಯಾವ ದೇಶಕ್ಕೆ ವಲಸೆ ಹೋಗುವುದು, ಸ್ವಂತ ಸಂಸ್ಥೆಯನ್ನು ಪ್ರಾರಂಭಿಸಿದರೆ ಸಂಗಾತಿ ಕೈಜೋಡಿಸಬಹುದೆ ಇತ್ಯಾದಿ) ಕೂಲಂಕಷವಾಗಿ ಚರ್ಚಿಸಿ ಒಮ್ಮತಕ್ಕೆ ಬಂದಿದ್ದಾರೆ. ಆದರೆ ತಮ್ಮ ಕಾಮೇಚ್ಛೆಯನ್ನಾಗಲೀ, ಶರೀರಸುಖವನ್ನು ಅನುಭವಿಸುವ ತವಕವನ್ನಾಗಲೀ ಹಂಚಿಕೊಂಡಿಲ್ಲ. ಮದುವೆಯ ನಂತರ ಹತ್ತಿಪ್ಪತ್ತು ಸಲ ಸಂಭೋಗದಲ್ಲಿ ತೊಡಗಿದ್ದಾರೆ. ಆದರೆ ಅದರಲ್ಲಿ ಇಬ್ಬರಿಗೂ ವಿಶೇಷ ಕಂಡಿಲ್ಲ. ಹಾಗಾಗಿ ಮದುವೆಯಾದ 2–3 ವರ್ಷಕ್ಕೆ ಸಂಭೋಗವು ಅವರ ಅರಿವಿಲ್ಲದಂತೆ ಹಾಸಿಗೆಯಿಂದ ಗಡಿಪಾರಾಗಿದೆ. ಅವರ ದಿನಚರಿ ಕೇಳುವಾಗ ಒಂದು ವಿಷಯ ಗೊತ್ತಾಗುತ್ತದೆ: ದಂಪತಿ ದಿನಾಲೂ ಮಲಗುವಾಗ ತಬ್ಬಿ ಮುತ್ತಿಡುತ್ತಾರೆ. ಅದಕ್ಕಿಂತ ಮುಂದುವರಿಯಲು ಸಂಗಾತಿಯಿಂದ ಬರುವ ಪ್ರೇರಣೆಗಾಗಿ ಕಾಯುತ್ತಾರೆ. ತಾವೇ ಶುರುಮಾಡಲು ಅದೇನೋ ಅಡ್ಡಿಯಾಗುತ್ತದಂತೆ. ನನ್ನ ಪ್ರಶ್ನೆ ಏನೆಂದರೆ, ಸಂಗಾತಿ ವ್ಯಕ್ತಪಡಿಸಿದರೆ ಮಾತ್ರ ಇವರಲ್ಲಿ ಕಾಮಾಸಕ್ತಿ ಹುಟ್ಟುವುದಾದರೆ ಇವರ ವ್ಯಕ್ತಿಗತ ಕಾಮಾಸಕ್ತಿಗೆ ಏನಾಗಿದೆ?

ಹೆಚ್ಚುಕಡಿಮೆ ಇಂಥದ್ದೇ ಸಂಗತಿ ಇನ್ನೊಂದು ದಂಪತಿಯಲ್ಲೂ ನಡೆಯುತ್ತಿದೆ. ಇಬ್ಬರೂ ಇಷ್ಟಪಟ್ಟು ಮದುವೆಯಾಗಿದ್ದಾರೆ. ಹೆಂಡತಿಗೆ ಮೊದಲ ಸಂಭೋಗದಲ್ಲಿ ನೋವಿನ ಭಯವಿದೆ. ಆದರೆ ಮುಖ್ಯ ವಿಷಯ ಅದಲ್ಲ. ಅವಳು ನೋವು ಅನ್ನುವಾಗ ಇವನೂ ಕರುಣೆ ತೋರುತ್ತ ಮುಂದುವರಿಯದೆ ಹಾಗೇ ಉಳಿದುಬಿಡುತ್ತಾನೆ. ಅವರೊಡನೆ ಕೆದಕುತ್ತ ಕೆದಕುತ್ತ ಗೊತ್ತಾಗಿದ್ದು ಏನೆಂದರೆ, ಅವಳಿಗೆಂಥ ನೋವೂ ಇಲ್ಲ. ಆದರೆ ಮೊದಲ ಸಲ ಸಂಭೋಗದ ಸಂದರ್ಭದಲ್ಲಿ ತನಗೆ ನೋವಾಗಬಹುದೇನೋ ಎಂಬ ಅಳುಕನ್ನು ಹಂಚಿಕೊಂಡಿದ್ದಾಳೆ. ಅದನ್ನೇ ಗಂಡ ಗಂಭೀರವಾಗಿ ಎಣಿಸಿದ್ದಾನೆ. ಮುಂದೆಲ್ಲ ಅವನು ಪ್ರಯತ್ನಿಸುವಾಗ ಅವಳು ಮೈಬಿಗಿ ಹಿಡಿದಿದ್ದನ್ನು ಗಮನಿಸಿ ತಕ್ಷಣವೇ ಅವನು ಹಿಂತೆಗೆದುಕೊಂಡು ಬೇರ್ಪಡುತ್ತಾನೆ. ಈ ಸಮಸ್ಯೆಯ ಬಗೆಗೆ ಅವರಿಬ್ಬರೂ ಮುಖಾಮುಖಿಯಾಗಿ ಮಾತಾಡಿ, ಪರಿಹಾರಕ್ಕೆ ಪ್ರಯತ್ನಪಟ್ಟಿದ್ದಾರೆಯೆ? ಇಲ್ಲ. ಯಾಕೆಂದು ಕೇಳಿದರೆ, ಇಬ್ಬರೂ ಸುಮ್ಮನೆ ಮುಖಮುಖ ನೋಡುತ್ತಾರೆ. ಇಂಥದ್ದನ್ನು ಮುಕ್ತವಾಗಿ ಚರ್ಚಿಸುವಷ್ಟು ಸಲಿಗೆ ಅವರಲ್ಲಿದೆ. ನನ್ನ ಪ್ರಶ್ನೆ ಏನೆಂದರೆ, ಮದುವೆಯ ಮುಖ್ಯ ಉದ್ದೇಶವೇ ಕಾಮಸುಖವೆಂದು ಇರುವಾಗ ಇವರ ಕಾಮಸುಖದ ಬಯಕೆಗೆ ಏನಾಗಿದೆ? ಹೆಂಡತಿಗೆ ನೋವು ಕೊಡಕೂಡದು ಎಂದು ಗಂಡ, ಗಂಡನೆದುರು ತನ್ನ ಕಷ್ಟವನ್ನು ತೋರಿಸಿಕೊಳ್ಳಬಾರದು ಎಂದು ಹೆಂಡತಿ ಅಂದುಕೊಳ್ಳುತ್ತಿದ್ದಾರೆಯೆ?

ಮೊನ್ನೆ 2016ನೆಯ ವರ್ಷದ ಕೊನೆಯಲ್ಲಿ ನನ್ನ ಮೆಡಿಸೆಕ್ಸ್ ಫೌಂಡೇಶನ್ ಸಂಸ್ಥೆಯ ಅಂಕಿಅಂಶಗಳ ಮೇಲೆ ಕಣ್ಣು ಹಾಯಿಸುತ್ತಿದ್ದಾಗ ವಿಚಿತ್ರ ಅಂಶವೊಂದು ಕಂಡುಬಂತು. ಗರ್ಭಧಾರಣೆ ಈಗಲೇ ಬೇಡವೆಂದು ನಿರ್ಧರಿಸಿರುವ ದಂಪತಿಗಳ ಪೈಕಿ ಹೆಚ್ಚಿನವರಲ್ಲಿ ಕಾಮಕೂಟವು ಅಷ್ಟಾಗಿ ನಡೆಯುವುದಿಲ್ಲ. ಇಂಥವರಲ್ಲಿ ಸಂಭೋಗದ ಆವರ್ತನೆಯು ಸರಾಸರಿ ತಿಂಗಳಿಗೊಂದು ಸಲಕ್ಕಿಂತಲೂ ವಿರಳವಾಗಿರುತ್ತದೆ. ಹಾಗೆಯೇ, ವಿವಾಹವಾಗಿ ಹಲವು ವರ್ಷಗಳು ಕಳೆದಿದ್ದರೂ (ಗರ್ಭಧಾರಣೆಯ ಉದ್ದೇಶ ಇಲ್ಲದಿದ್ದರೂ) ಮೊದಲ ಸಂಭೋಗದ ಆಗದೆ ಇರುವ ದಂಪತಿಗಳಲ್ಲೂ ಕಾಮಕೂಟದ ಆವರ್ತನೆಯು ಸಾಮಾನ್ಯ ದಂಪತಿಗಳಿಗೆ ಹೋಲಿಸಿದರೆ ಅಪರೂಪವಾಗಿದೆ.

ಇದೆಲ್ಲ ಯಾಕೆ ಮುಖ್ಯವಾಗಿದೆ ಎಂದು ಹೇಳಿಬಿಡುತ್ತೇನೆ. ಕಾಮಾಸಕ್ತಿ ಹಾಗೂ ಸಂಭೋಗದ ಬಯಕೆಯು ಮಾನವರು ಎನ್ನಿಸಿಕೊಳ್ಳುವ ಪ್ರತಿಯೊಬ್ಬರಲ್ಲೂ ಪ್ರವೃತ್ತಿಯಾಗಿ ಬಂದಿದೆ. ಒತ್ತಡ–ವಿರಸ ಇಲ್ಲದಿದ್ದರೂ ಕಾಮಕೂಟವು – ಅದರಲ್ಲೂ ಸಂಭೋಗವು – ವಿರಳವಾಗುವುದಕ್ಕೆ ಏನು ಕಾರಣ? ಮಾನವರ ಕಾಮಪ್ರವೃತ್ತಿಯಲ್ಲೇ ತೀವ್ರ ಏರುಪೇರಾಗುತ್ತಿದೆಯೆ?

ಇದರ ಬಗೆಗೆ ಮುಂದಿನ ವಾರ ಚರ್ಚಿಸೋಣ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: **www.medisex.org**